ಮಾಡುವ ಹುರುಪಿನಲ್ಲಿ ಅವನಿದ್ದ. ತಾನೊಬ್ಬ ನುರಿತ ಹುಲಿ ಜಾಡು ಪತ್ತೆ ಮಾಡುವ ತಜ್ಞ ಎಂಬುದನ್ನು ಆ ಹುಡುಗಿಗೆ ಸಾಬೀತು ಪಡಿಸುವ ಇರಾದೆ ಅವನಲ್ಲಿತ್ತು. ಡಾಕ್ಟ್ರು ಝಾಡಿಸಿದ್ದು ಅವನ ಮರ್ಮಾಂಗಕ್ಕೆ ತಾಗಿತ್ತು. ಆತನ ಇನಿಯಳೂ ಸಿಡಿಮಿಡಿಗೊಂಡು. 'ಅದಕ್ಕೆ ನಾ ನಿನಗೆ ಹೇಳೋದು ಯಾರಿಗೂ ಉಪಕಾರ ಮಾಡೋಕೆ ಹೋಗಬ್ಯಾಡಂತ' ಎಂದು ಧಿಮಾಕಿನ ತನ್ನ ಸೊಟ್ಟಮೋರೆ ಉಬ್ಬಿಸಿಕೊಂಡಳು.

ಹುಡುಗ ದಿಕ್ಕುತಪ್ಪಿದ ಶ್ರೀಮಂತರ ಏಕೈಕ ಕುಡಿಯೆಂಬುದು ಪದೇ ಪದೇ ಸಾಬೀತಾಗುತ್ತಿತ್ತು. ಡಾಕ್ಟ್ರು ಬೈಗುಳ ಅವನ ಉಗುರಿನ ತುದಿಗೂ ತಾಕಿರಲಿಲ್ಲ. ಆತ ತನ್ನ ಚೇಷ್ಟೆ ಮತ್ತು ಹುಚ್ಚುತನ ಮತ್ತಷ್ಟು ವಿಸ್ತರಿಸಿದ. ಕ್ಯಾಮೆರಾ ಹಿಡಿಯುತ್ತಿದ್ದ ಭಂಗಿ ಭಾವದಲ್ಲೇ ಇವನೊಬ್ಬ ಅಡ್ಡಕಸುಬಿ ಪಟಗಾರ ಎಂಬುದು ತಿಳಿಯಬಹುದಿತ್ತು. ಸ್ವಲ್ಪವೂ ಮೆಚ್ಯೂರಿಟಿ ಇರಲಿಲ್ಲ. ತನ್ನ ಸಾಮರ್ಥ್ಯ ಹೆಚ್ಚಿಸಲು ಐಟಿ, ಬಿಟಿ ಕಂಪನಿ ಹೆಸರೇಳಿಕೊಂಡ. ನನಗಂತೂ ಅರ್ಥವಾಗಲಿಲ್ಲ. ಈ ಬಗೆಯ ಕೆಲ ಸ್ಯಾಂಪಲ್ ಪೀಸುಗಳ ಸಂಖ್ಯೆ ಈಗ ಪಟ ಪ್ರಪಂಚದಲ್ಲಿ ದುಪ್ಪಟ್ಟಾಗಿ ಬೆಳೆಯುತಿದೆ. ಕೆಲವರು ದುಡ್ಡಿದೆ ಎಂದು ಆಧುನಿಕ ಕ್ಯಾಮೆರಾಗಳನ್ನು ತಂದು ಝೂಂ ಜೂಂ ಎಂದು ಝಳಪಿಸಿ ಒಂದೂ ನೆಟ್ಟಗಿನ ಪಟ ತೆಗೆಯದೆ ಸ್ವಂಟು ಮಾಡಿ ಮಾಯವಾಗುತ್ತಾರೆ. ದುಬಾರಿ ಕಂಪನಿಯ ಫೋಟೊಗ್ರಫಿ ಬಟ್ಟೆಗಳು, ಚಷ್ಮಾ, ನವೀನ ಬಗೆಯ ಸರಕು ಸರಂಜಾಮು ತಂದು ಕಣ್ಣು ಕುಕ್ಕಿಸುತ್ತಾರೆ. ಫೋಟೊಗ್ರಫಿ ಎಂಬುದು ಒಂದು ಕಲೆ, ಸಣ್ಣ ಧ್ಯಾನ, ಪರಿಸರವನ್ನು ಅರಿತು ಸವಿಯುವ ಒಂದು ವಿಧಾನ ಎಂಬ ವಿವೇಕಗಳೆಲ್ಲಾ ಇವರಿಗೆ ಕಾಲಕಸ.

ಸಫಾರಿಯ ಜೀಪು ಹತ್ತಿದ ಕ್ಷಣದಿಂದಲೂ ಸಿರಿವಂತ ಹುಡುಗನ ಮಾತು ನಡತೆ ವಕ್ರವಾಗಿದ್ದವು. ನನಗೂ ಹುಡುಗನ ನಡವಳಿಕೆ ಕಿರಿಕಿರಿ ಎನಿಸುತ್ತಿದ್ದರೂ ನನ್ನೆಲ್ಲಾ ಸಿಟ್ಟು ಒಟ್ಟಾಗಿ ಸ್ವಾಕು ಕೊಂಚ ಹೆಚ್ಚಾಗಲಿ ಎಂದು ಕಾಯುತ್ತಿದ್ದೆ. ನನ್ನ ಮುಗಿಬೀಳುವ ಇಚ್ಛೆ ಉದಯಿಸುವ ಮೊದಲೇ ಡಾಕ್ಟ್ರು ಪಟಾಕಿ ಸಿಡಿಸಿ ಬಿಟ್ಟರು. ಜೇನುಹುಳದಂತೆ ಕ್ಷಣಾರ್ಧದಲ್ಲಿ ದಾಳಿ ಮಾಡಿ ನನ್ನ ಅವಕಾಶ ಕಿತ್ತುಕೊಂಡಿದ್ದರು. ರಾಘು ಜಾಗದಲ್ಲಿ ನನ್ನ ಪ್ರಾಚೀನ ಫೋಟೊಗುರು ಲೋಕೇಶ್ ಮೊಸಳೆ ಇದ್ದಿದ್ದರೆ ಮುಲಾಜಿಲ್ಲದೆ ತದುಕಿಯೇ ಬಿಡುತ್ತಿದ್ದರು. ಹುಡುಗ ಪಕ್ಕಾ ಅವಿವೇಕಿ ಎನಿಸುತ್ತಿದ್ದ. ಆತ ಬೇರೆ

